ಮಾರಾಯ್ರೆ... ಅದೆಂತಾ ಜಾತಿಯ ಮರ, ಬಿಳಿಕೇಪಳ ಅಂದ್ರೆ?!' ಹೀಗಂತ ಪೂವ ಮರಕಾಲ ತಟ್ಟನೆ ಪಟೇಲರಿಗೇ ಮರುಪ್ರಶ್ನೆ ಹಾಕಿದ್ದ.

ಆತನಿಗೆ ತುಳುನಾಡಲ್ಲಿ ದೈವ–ದೇವರ ಆರಾಧನೆಗೆ ಕಡ್ಡಾಯವಾಗಿ ಬಳಕೆಯಾಗುವ ಕೆಂಪುಕೇಪಳದ ಹೂವು(ಕಿಸ್ಗಾರದ ಹೂ) ಗೊತ್ತು. ಆದರೆ ಇದುವರೆಗೂ ಆತನಿಗೆ ಬಿಳಿಕೇಪಳದ ಮರವನ್ನು ನೋಡಿದ ನೆನಪೇ ಇಲ್ಲ. ಕಟ್ಟಹುಣಿಗಳಲ್ಲಿ, ಕಾಡುಗುಡ್ಡಗಳಲ್ಲಿ ಕೆಂಪುಕೇಪಳದ ಪುಟ್ಟಪೊದೆ, ಗಿಡಗಳನ್ನು ನೋಡುತ್ತ, ಅದರ ಹಣ್ಣುಗಳನ್ನು ತಿನ್ನುತ್ತ ಬೆಳೆದವನು ಅವನು. ಆದರೆ ಕೆಂಪುಕೇಪಳದ ಚಿಕ್ಕಮ್ಮ, ದೊಡ್ಡಮ್ಮನಂತಿರಬಹುದಾದ ಈ ಬಿಳಿಕೇಪಳ ಗಿಡವು ಕೊಡಿಮರಕ್ಕೆ ಬೇಕಾಗುವಷ್ಟು ಎತ್ತರಕ್ಕೆ ಬೆಳೆಯುವಂತದ್ದಾ!? ಎನ್ನುವ ಆಶ್ಚರ್ಯ ಅನುಮಾನದಲ್ಲೇ, ಆತ 'ಅದು ಯಾವ ಜಾತಿಯ ಮರ?' ಎಂದು ಪಟೇಲರಿಗೆ ಮರುಪ್ರಶ್ನೆ ಹಾಕಿದ್ದು, ಅಷ್ಟೆ.

**ಇನ್ನೂ ಒಂದು ಕತೆ ಕೇಳಿಲ್ಲಿ; ನನ್ನಜ್ಜನ ಅಜ್ಜನವರ ಕಾಲದಲ್ಲಂತೆ... ಒಂದು ವಾರದ ಕಾಲ ರಕ್ಕಸ ಮಳೆ ಬಂತಂತೆ. ಫಲ್ಗುಣಿ ನದಿಯಲ್ಲಿ ನೆರೆಯೇರಿ, ದಿನಗಟ್ಟಲೆ ನಮ್ಮ ಊರೆಲ್ಲ ಆ ನೆರೆಯಲ್ಲಿ ಮುಳುಗಿ ಕೂತಿತೂ.. ಆವಾಗ ಹಲವು ಮನೆಗಳ ಜೊತೆಗೆ ಆ ಧೂಮಾವತಿ ದೈವಸ್ಥಾನವೂ ಕುಸಿಯಿತಂತೆ. ನೆರೆ ಬಂತೂ.. ಬಂತು... ಬಂತು...**

ದೇವಪ್ಪ ಶೆಟ್ರು ಕುತ್ತೆತ್ತೂರಿನ ತನ್ನ ಅಜ್ಜಿಮನೆಯ ತೋಟಕ್ಕೆ ತಗಲಿಕೊಂಡಂತಿದ್ದ ಕಾಡಿನಲ್ಲಿ ಹಾಗೂ ತನ್ನ ಬಂಧು ಬಳಗವಿದ್ದ ಮೂಡ್ಲಾಗಿನ ಹಾಗೂ ಬಡ್ಲಾಗಿನ(ಮೂಡು ಮತ್ತು ಉತ್ತರದ) ಹಲವು ಕಾಡುಗಳಲ್ಲಿ ಈ ಬಿಳಿಕೇಪಳದ ಬಲಿಷ್ಠ ಮರಗಳನ್ನು ನೋಡಿದ್ದರಿಂದ, 'ಅಲ್ಲಾ ಮಾರಾಯ, ಹಿಂದೆ ಆ ಜಾತಿಯ ಮರ ನಮ್ಮಲ್ಲೇ ಬೇಕಾದಷ್ಟಿತ್ತು. ಅದು ಅಷ್ಟೊಂದು ಎತ್ತರವಿಲ್ಲದಿದ್ದರೂ ಗನಾಗಟ್ಟಿ ಮರವದು. ಎಷ್ಟು ಕಾಲವಾದರೂ ಅದು ಉದ್ದಕ್ಕೆ ಸೀಳುಬಿಡದ ಜಾತಿಯಾಗಿದ್ದರಿಂದ, ಸಾಗುವಾನಿ, ಕಿರಾಲ್‌ಬೋಗಿಗಿಂತಲೂ ಊಂಚಿ ಮರವದು. ಎಲ್ಲದಕ್ಕೂ ಒಳ್ಳೆಯದಂರಿದು ಅಂತ ಮನೆ ಕಟ್ಟುವುದಕ್ಕೂ, ದೈವ–ದೇವಸ್ಥಾನಕ್ಕೂ ಅದನ್ನೇ ಬಳಸಿ ಅದರ ಜಾತಿಯನ್ನು ಈಗ ನಾವು ಲಗಾಡಿ ತೆಗೆದುಬಿಟ್ಟಿದ್ದೇವೆ. ಈಗ ನಮ್ಮ ಕೊಡಿಮರಕ್ಕೆ ಅದೇ ಮರ ಬೇಕು ಅಂದ್ರೆ ನಾನು ಎಲ್ಲಿಂದ ಹುಡುಕಿ ತರ್ಬೇಕು ಮಾರಾಯ?...'

ಪಟೇಲ್ರ ಸಂಕಷ್ಟದ ಮಾತಿನೆಳೆಯನ್ನು ಅಲ್ಲಿಗೇ ತುಂಡರಿಸಿಬಿಟ್ಟ ಪೂವ ಮರಕಾಲ, ಹೊಸ ಪ್ರಶ್ನೆಯೊಂದನ್ನು ಅವರ ಮುಂದಿಟ್ಟಿದ್ದ. 'ಪಟ್ಲೆರೆ, ಅಷ್ಟಮಂಗಲವನ್ನಿಟ್ಟ ಅಷ್ಟು ದೊಡ್ಡ ತಂತ್ರಿಗಳೇ 'ಮರ ಸಿಗದಿದ್ರೆ ತೆಕ್ಕಿದ(ಸಾಗುವಾನಿ) ಮರವೂ ಆಗಬಹುದು' ಅಂತ ಹೇಳಿದ ಮೇಲೆ ಈ ಮುದಿ ನಾರ್ಣಮಯ್ಯರದ್ದು ಏನಂತೆ ಕಿರಿ ಕಿರಿ? ಅವರಿಗೆ ನಮ್ಮನ್ನು ದಾರಿ ತಪ್ಪಿಸುದೇ ದೊಡ್ಡ ಕೆಲ್ಸ ಆಗಿದೆ. ಈ ಲೋಕದಿಂದಲೇ ಲಗಾಡಿ ಹೋದ ಆ ಮರವನ್ನು... ಈ ಸೂದ್ರ ಮಕ್ಕಳು, ಹುಡುಕಿ ಹುಡುಕಿ ಸಾಯ್ಲಿ... ಅನ್ನುವ ಎಂಬ ಒಳ ಕೆರೆತವೂ ಅವರಿಗೆ ಇರಬಹುದಲ್ವೇ?...' ಎಂದು ಕೇಳಿದ್ದ.

'ಇಲ್ಲ ಮಾರಾಯ... ಹಾಗೆನಿಲ್ಲ ಬಿಡು; ಅವ್ರು ಆ ಕಾಲದವರಲ್ವ, ದೈವ ದೇವರ ಇಚಾರದಲ್ಲಿ